ಯಾವುದೇ ಒಂದು ಯೋಜನೆಯನ್ನು ಮಾಡಿಲ್ಲ. ಇದರ ಬಗ್ಗೆ ಅಲ್ಲಿನ ಜನರನ್ನು, ಸಂಬಂಧಪಟ್ಟ ಅಧಿಕಾರಿಗಳನ್ನು ಹಾಗೂ ಶಾಸಕರನ್ನು ಬರಮಾಡಿಕೊಂಡು ಯಾವುದೇ ಒಂದು ನಿರ್ಣಯವನ್ನು ಮಾಡದೇ ಹೋದರೆ ತೀವ್ರ ಪ್ರತಿಭಟನೆಯಾಗುತ್ತದೆಂದು ನಾನು ಎಚ್ಚರಿಕೆ ಕೊಡುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ಕೆ.ಹೆಚ್. ಪಾಟೀಲ್‌ರವರು ಹೇಳುತ್ತಾರೆ, ಬದಲಾವಣೆಯಾಗಿರುವ ಪ್ರದೇಶದಲ್ಲಿ ಕಾರ್ಪೋರೇಷನ್‌ರವರು ಸುಮಾರು ಐವತ್ತು ಸಾವಿರ ರೂಪಾಯಿಯನ್ನು ವೆಚ್ಚ ಮಾಡುವ ನಿರ್ಧಾರವನ್ನು ತೆಗೆದುಕೊಳ್ಳಬೇಕು, ನೀವು ಏಕೆ ಅದರಲ್ಲಿ ಪ್ರವೇಶ ಮಾಡುತ್ತೀರಿ ಎಂದು ಹೇಳುತ್ತಾರೆ. ಬೆಳಗಾಂನ ಮಾನ್ಯ ಪಾಟೀಲರು ಆ ಸ್ಥಳದಲ್ಲಿಯೇ ಮೂರ್ತಿಯನ್ನು ಪ್ರತಿಸ್ಥಾಪಿಸಬೇಕು, ಇಲ್ಲದಿದ್ದರೆ ವಿಪರೀತ ತೊಂದರೆಯಾಗುತ್ತದೆಂದು ಹೇಳುತ್ತಾರೆ. ಇದನ್ನು ನೋಡಿದರೆ ಆರಿಬ್ಬರಲ್ಲಿಯೇ ವ್ಯತ್ಯಾಸ ಕಾಣುತ್ತದೆ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ವ್ಯತ್ಯಾಸವೇನೂ ಇಲ್ಲ, ಪ್ರಶ್ನೆಗಳು ಮಾತ್ರ ಬೇರೆ ಬೇರೆಯಾಗಿದೆ.

(ಗೊಂದಲ)

ಶ್ರೀ ಎಂ. ಚಂದ್ರಶೇಖರ್.— ಮೊದಲು ೧೯೭೪ರಲ್ಲಿ ಏನು ತೀರ್ಮಾನವಾಗಿತ್ತೋ ಅಲ್ಲೇ ಪುತ್ಥಳಿಯನ್ನು ಹಾಕಬೇಕೆಂದು ನಿಮ್ಮ ಅಭಿಪ್ರಾಯ, ಅದರೆ ಮಾನ್ಯ ಪಾಟೀಲರ ಅಭಿಪ್ರಾಯ.....

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಒಂದು ಠರಾವನ್ನು ಮಾಡಿದ ಮೇಲೆ ಅದನ್ನು ಪಾಲನೆ ಮಾಡುವುದು ಜನರ ಕರ್ತವ್ಯ, ನಿಮ್ಮ ಕರ್ತವ್ಯ ಹಾಗೂ ನಮ್ಮ ಕರ್ತವ್ಯವಾಗಿದೆ....

(ಗೊಂದಲ)

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ೨೨-೭-೮೭ರಲ್ಲಿ ಈ ಠರಾವನ್ನು ಮಾಡಿದರು...

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಭಿನ್ನಾಭಿಪ್ರಾಯ ಇದೆಯೆಂದು ಹೇಳುತ್ತಿದ್ದಾರೆ, ಆದರೆ ನಮ್ಮಲ್ಲಿ ಯಾವ ರೀತಿಯ ಭಿನ್ನಾಭಿಪ್ರಾಯವೂ ಇಲ್ಲ, ಅವರು ಸಾರ್ವಜನಿಕ ಅಭಿಪ್ರಾಯ ಏನು ಇದೆ ಅದಕ್ಕೇ ಮನ್ನಣೆ ಕೊಡುತ್ತಾರೆಯೇ ಎಂದು ಕೇಳುತ್ತೇನೆ. ಮಾನ್ಯ ಪಾಟೀಲ್‌ರವರು ಹೇಳಿದಹಾಗೆ, ಏನು ಬದಲಾವಣೆಯಾಗಿದೆ ಅದಕ್ಕೆ ಈಗಾಗಲೇ ಸರ್ಕಾರದವರು ತಡೆಮಾಡಿದ್ದಾರೆ. ಆದ್ದರಿಂದ ಜನಸಾಮಾನ್ಯರ ಅಭಿಪ್ರಾಯ ಏನು ಇದೆ ಅದನ್ನು ಅವರು ಒಪ್ಪುತ್ತಾರೆಯೋ ಇಲ್ಲವೋ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ನಗರಪಾಲಿಕೆಯಿಂದ ಮೇಲೆ ಅಲ್ಲಿ ಜನರ ಪ್ರತಿನಿಧಿಗಳು ಇರುತ್ತಾರೆ. ನಾವು ಏನೊಂದು ತೀರ್ಮಾನವನ್ನು ಮಾಡುವಾಗಲೂ ಆ ಜನರ ಪ್ರತಿನಿಧಿಗಳ ಒಂದು ಅಭಿಪ್ರಾಯ ಹಾಗೂ ಜವಾಬ್ದಾರಿಯನ್ನು ತೆಗೆದುಕೊಂಡು ಮಾಡುತ್ತೇವೆ. ನಗರಪಾಲಿಕೆಯಲ್ಲಿ ಯಾವುದೇ ಒಂದು ತೀರ್ಮಾನ ಮಾಡುವಾಗ ಅದಕ್ಕೆ ಜನರ ಅಭಿಪ್ರಾಯವನ್ನು ಕಡೆದು ಮಾಡಿರುತ್ತಾರೆ ಎನ್ನುವ ಅಭಿಪ್ರಾಯಕ್ಕೆ ನಾವು ಬರಬೇಕಾಗುತ್ತದೆ. ಮೊತ್ತೊಮ್ಮೆ ಪರಿಶೀಲನೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

೧೦.೦೦ ಪಿ.ಎಂ.

೨) ಸಾಗರ ತಾಲ್ಲೂಕು ಕಳಸವಳ್ಳಿ ಗ್ರಾಮದಲ್ಲಿ ನಡುತೋಪು ಮಾಡುವಾಗ ಮೈಸೂರು ಕಾಗದ ಕಾರ್ಖಾನೆಯ ಅಧಿಕಾರಿಗಳು ಸಾರ್ವಜನಿಕರ ಮೇಲೆ ಹಲ್ಲೆ ಮಾಡಿರುವುದರ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಸಾಗರ ತಾಲ್ಲೂಕಿನ ಕಳಸವಳ್ಳಿ ಗ್ರಾಮದ ಸರ್ವೆ ನಂ. ೮೧ರಲ್ಲಿ ''ನೆಡುತೋಪು'' ಮಾಡುವ ಬಗ್ಗೆ ತಡೆಯಾಜ್ಞೆ ಕೊಟ್ಟಿದ್ದರೂ ಸಹ ಸದರಿ ಸ್ಥಳದಲ್ಲಿ ''ನೆಡುತೋಪು'' ಮಾಡುವ ಬಗ್ಗೆ ಸಾರ್ವಜನಿಕರ ಮೇಲೆ ಮೈಸೂರು ಕಾಗದ ಕಾರ್ಖಾನೆಯ ಅಧಿಕಾರಿಗಳು ಹಲ್ಲೆ ನಡೆಸಿರುವ ಬಗ್ಗೆ ಮಾನ್ಯ ಅರಣ್ಯ ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಧರ್ಮಪ್ಪ.—ಮಾನ್ಯ ಅಧ್ಯಕ್ಷರೇ, ಇದೇ ವಿಷಯದಲ್ಲಿ ನಾನೂ ಕೂಡ ಕಳಿಸಿದ್ದೆ.

ಶ್ರೀ ಜಿ. ಎಸ್ ಬಾಗಲ್‌ಕೋಟೆ (ಅರಣ್ಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಸಾಗರ ತಾಲ್ಲೂಕು ಕಳಸವಳ್ಳಿ ಗ್ರಾಮದ ಸರ್ವೆ ನಂ. ೮೧ ಶರಾವತಿ ಜಲಾನಯನ ಪ್ರದೇಶಕ್ಕೆ ತಾಗಿದ ಕೆರೆ ಅಂಗಳದ ಜಾಗವಾಗಿರುತ್ತದೆ. ಈ ಜಾಗವನ್ನು ಕಂದಾಯ ಇಲಾಖೆಯವರು ಕರ್ನಾಟಕ ವಿದ್ಯುತ್ ನಿಗಮಕ್ಕೆ ಲಿಂಗನಮಕ್ಕಿ ಜಲಾಶಯ ನಿರ್ಮಾಣದ ಸಮಯದಲ್ಲಿ ಹಸ್ತಾಂತರಿಸಿದ್ದಾಗಿರುತ್ತದೆ. ದಿನಾಂಕ ೧೮-೯-೬೬ರಂದು ನಡೆದ ಆರ್ಥಿಕ ಮತ್ತು ಯೋಜನಾ ಪರಿಷತ್ ಸಭೆಯಲ್ಲಿ ಮುಖ್ಯಮಂತ್ರಿಯವರ ಸಲಹೆಯಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಮತ್ತು ಇತರ ಉನ್ನತ ಅಧಿಕಾರಿಗಳು ಮೈಸೂರು ಕಾಗದದ ಕಾರ್ಖಾನೆ ಭದ್ರಾವತಿ ಇವರಿಗೆ ಮಣ್ಣು ಸವಕಳಿ ತಡೆಗಟ್ಟಲು ನೆಡುತೋಪುಗಳನ್ನು ಬೆಳೆಸಲು ಆದೇಶಿಸಲಾಗಿತ್ತು.

ಅಕ್ಟೋಬರ್, ನವೆಂಬರ್ ೧೯೬೬ರಲ್ಲಿ ನೆಡುತೋಪುಗಳನ್ನು ಬೆಳೆಸಲು ಮುಂಗಡ ಕೆಲಸಗಳನ್ನು ತೆಗೆದುಕೊಳ್ಳುವ ಪೂರ್ವದಲ್ಲಿ ಸುತ್ತಮುತ್ತಲ ಗ್ರಾಮಸ್ಥರೊಡನೆ ಚರ್ಚಿಸಿ ಅವರ ಒಪ್ಪಿಗೆಯ ಮೇರೆಗೆ ಸುಮಾರು ೧೭ ಹೆಕ್ಟೇರ್ ಅಂದಾಜು ರೂ. ೫೩,೦೦೦ ವೆಚ್ಚದಲ್ಲಿ ಈ ವರ್ಷ ಜುಲೈ ೧೯೬೭ನೇ ಮಳೆಗಾಲದಲ್ಲಿ ಪೈನ್ಸ್, ಬಳಂಜಿ ಗ್ಲೆರಿಸೇಡಿಯಾ ಮತ್ತು ಆಕೇಶಿಯಾ ಗಿಡಗಳನ್ನು ನೆಡಲಾಯಿತು.

ಸಾಗರದಿಂದ ಸುಮಾರು ೫೦-೬೦ ಜನರು ಇಬ್ಬರು ಮಹಿಳೆಯರನ್ನೊಡಗೊಂಡಂತೆ ''ವೃಕ್ಷ ಆಂದೋಲನ'' ಸಂಘದ ಸದಸ್ಯರು ಎಂದು ಹೇಳುತ್ತಾ ನೆಟ್ಟ ಗಿಡಗಳನ್ನು ಕಿತ್ತು ಹಾಕಿ ಕೆಲಸ ಮಾಡುತ್ತಿದ್ದ ಕೂಲಿಕಾರರಿಗೆ ಅಡ್ಡಿಪಡಿಸಿ ಅವರ ಮೇಲೆ ಕೈಮಾಡಿದ್ದಲ್ಲದೆ ವಲಯ ಅರಣ್ಯಾಧಿಕಾರಿಗಳಾದ ಶ್ರೀ ನಾಗರಾಜ್ ಅವರ ಮೇಲೆ ಹಲ್ಲೆ ಮಾಡಿ ಶ್ರೀ ಅಶ್ವತ್ಥನಾರಾಯಣಗೌಡ ಅವರನ್ನು ತುಮರಿ ಎನ್ನುವ ಊರಲ್ಲಿ ಕೂಡಿ ಹಾಕಿ ಗೃಹ ಬಂಧನದಲ್ಲಿ ಇಟ್ಟಿದ್ದರು ಈ ಬಗ್ಗೆ ಆರಕ್ಷಕ ಠಾಣೆಗೆ ಮೈಸೂರು ಕಾಗದದ ಕಾರ್ಖಾನೆಯ ಸಿಬ್ಬಂದಿಗಳು ದೂರು ಕೊಟ್ಟ ಮೇಲೆ ಪೋಲೀಸರು ಬಂದು ಅವರನ್ನು ಬಿಡಿಸಿದರು. ಹಲ್ಲೆಗೊಳಗಾದ ಸಿಬ್ಬಂದಿ ಮತ್ತು ಕೂಲಿಕಾರರನ್ನು ಕಾರ್ಗಲ್ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಲಾಯಿತು.

ಈ ಮಧ್ಯೆ ಅರಣ್ಯ ಮಂತ್ರಿಗಳಿಂದ ಬಂದ ಆದೇಶದಂತೆ ದಿನಾಂಕ ೧೪-೮-೬೭ ರಂದು ನಿರ್ದೇಶಕರು (ಅರಣ್ಯ) ಮೈಸೂರು ಕಾಗದದ ಕಾರ್ಖಾನೆ ಇವರಿಗೆ ಕೂಡಲೇ ಗಿಡ ನೆಡುವುದನ್ನು ನಿಲ್ಲಿಸಲು ತಡೆಯಾಜ್ಞೆ ನೀಡಲಾಗಿದ್ದು ತದನಂತರ ನೆಡುತೋಪುಗಳ ಕೆಲಸವನ್ನು ನಿಲ್ಲಿಸಲಾಗಿದೆ.

ಭಾರತ ಸರ್ಕಾರವು ಶರಾವತಿ ಟೈಲ್ ರೇಸ್ ಜಲವಿದ್ಯುತ್ ಯೋಜನೆ ನಿರ್ಮಿಸಲು ಬೇಕಾಗುವ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಲು ಕರ್ನಾಟಕ ಸರ್ಕಾರಕ್ಕೆ ಆದೇಶಿಸಿದೆ. ಆದೇಶದಲ್ಲಿ ಕೆಲವು ಷರತ್ತುಗಳನ್ನು ವಿಧಿಸಿದ್ದು, ಮುಖ್ಯವಾಗಿ ಜಲವಿದ್ಯುತ್ ಯೋಜನೆಗೆ ಈಗಾಗಲೇ ಬಿಡುಗಡೆ ಮಾಡಲಾದ ಯೋಜನೆಯ ಜಲಾನಯನ ಪ್ರದೇಶಗಳಲ್ಲಿ ಇರುವ ಕೆರೆ ಅಂಗಳದಲ್ಲಿ, ಕಾಲುವೆ ಇತ್ಯಾದಿ ಅಲ್ಲದೆ ಕರ್ನಾಟಕ ವಿದ್ಯುತ್ ನಿಗಮದ ಆಶ್ರಯದಲ್ಲಿ ಇದ್ದಂತಹ ಇತರ ಬೀಳು ಜಮೀನಿನಲ್ಲಿ ನೆಡುತೋಪುಗಳನ್ನು ಬೆಳಸತಕ್ಕದ್ದು ಎಂಬ ಶರತ್ತುಗಳೊಂದಿಗೆ ಮಂಜೂರು ಮಾಡಿರುತ್ತಾರೆ. ಇದನ್ನು ಅನುಸರಿಸಿ ಉನ್ನತ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ನಿರ್ಧರಿಸಿದಂತೆ ಕಂದಾಯ ಇಲಾಖೆಯಿಂದ ಹಸ್ತಾಂತರಿಸಲಾದ ಲಿಂಗನಮಕ್ಕಿ ಕೆರೆ ಅಂಗಳದ ಜಾಗವನ್ನು ಮೈಸೂರು ಕಾಗದದ ಕಾರ್ಖಾನೆ, ಭದ್ರಾವತಿ, ಇವರಿಗೆ ನೆಡುತೋಪುಗಳನ್ನು ಬೆಳೆಸಲು ವರ್ಗಾಯಿಸಲಾಯಿತು.

ಮೈಸೂರು ಕಾಗದದ ಕಾರ್ಖಾನೆ, ಭದ್ರಾವತಿ ಇವರು ಈ ವರ್ಷದ ಜುಲೈ, ಆಗಸ್ಟ್, ತಿಂಗಳಲ್ಲಿ ನೆಟ್ಟ ಗಿಡಗಳನ್ನು ''ವೃಕ್ಷ ಆಂದೋಲನ'' ಸಮಿತಿಯವರು ಹಠಾತ್ತಾಗಿ ಕಿತ್ತುಹಾಕಿದ ಜಾಗಗಳಲ್ಲಿ ಪುನಃ ನೆಡುತೋಪುಗಳನ್ನು ಬೆಳೆಸಬೇಕೆಂದು ತಾವೇ ಖುದ್ದಾಗಿ ಗಿಡ ನೆಡಲು ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಸದಸ್ಯರು ಒಮ್ಮತದಿಂದ ನಿರ್ಧರಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ನೆಡುತೋಪು ಬೆಳೆಸಲು ಸೂಚನೆಯನ್ನೂ ಕೊಟ್ಟಿರುತ್ತಾರೆ.

ನಿರ್ದೇಶಕರು (ಅರಣ್ಯ), ಮೈಸೂರು ಕಾಗದದ ಕಾರ್ಖಾನೆ, ಇವರು ಸಲ್ಲಿಸಿದ ವರದಿಯಂತೆ ಕಾಗದದ ಕಾರ್ಖಾನೆಯ ಸಿಬ್ಬಂದಿಗಳು ಹಳ್ಳಿಯ ಮುಗ್ಧ ಜನರುಗಳ ಮೇಲೆ ಯಾವುದೇ ತರಹದ ಹಲ್ಲೆಯನ್ನು ನಡೆಸಿಲ್ಲ, ಆಲ್ಲದೆ ಹಕಾತ್ತಾಗಿ ವೃಕ್ಷ ಆಂದೋಲನ ಸಮಿತಿಯವರು ನೆಟ್ಟ ಗಿಡಗಳನ್ನು ಕಿತ್ತಿ ಹಾಕಿ ಅಲ್ಲಿಯ ಕೂಲಿಕಾರರು ಮತ್ತು ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿರುತ್ತಾರೆ. ಅಧಿಕಾರಿಗಳು ಮುಗ್ಧ ಜನರ ಮೇಲೆ ಹಲ್ಲೆ ಮಾಡಿರುತ್ತಾರೆ ಎಂಬ ಆಪಾದನೆಯು ಸತ್ಯಕ್ಕೆ ದೂರವಾಗಿರುತ್ತದೆ. ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಇದೀಗ ಪ್ರಶ್ನೋತ್ತರ ಸಮಯದಲ್ಲಿ ಚರ್ಚೆ ಕೂಡ ಆಗಿದೆ,

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಸಾಗರ ತಾಲ್ಲೂಕು ಕಳಸವಳ್ಳಿ ಗ್ರಾಮದ ಸರ್ವೆ ನಂಬರ್ ೮೧ ರಲ್ಲಿ ಎಂ.ಪಿ.ಎಂ. ನವರು ನೆಡುತೋಪು ಮಾಡಬಾರದು, ಅಲ್ಲಿರುವಂಥ ರೈತರಿಗೆ ಗೋಮಾಳಕೊಸ್ಕರ, ಮೇವಿಗೋಸ್ಕರ, ಆ ಜಾಗಬೇಕು, ಆಲ್ಲಿರುವಂಥ ತೋಟಗಳಿಗೆ ಮಣ್ಣಿನ ಉಪಯೋಗವಾಗುತ್ತದೆ ಎಂದು ಇದ್ದರೂ ಅಲ್ಲಿನ ಸುತ್ತಮುತ್ತಲ ಪ್ರದೇಶಗಳಲ್ಲಿ ನೆಡುತೋಪುಗಳನ್ನು ಮಾಡಿದ್ದಾರೆ. ಇದನ್ನು ಉಳಿಸಿಕೊಡಬೇಕು ಎಂದು ಹೋರಾಟ ಸಮಿತಿಯವರು ೧೩-೭-೮೭ ರಂದು ಸನ್ಮಾನ್ಯ ಅರಣ್ಯ ಸಚಿವರನ್ನು ಭೇಟಿ ಮಾಡಿದ್ದರು ಅವರು ಕೊಟ್ಟಂತಹ ಮನವಿಯನ್ನು ನೋಡಿ ಮಾನ್ಯ ಅರಣ್ಯ ಮಂತ್ರಿಗಳು ತಕ್ಷಣ ಆರ್ಡರ್ ಮಾಡಿಕೊಂಡು, ಅದು ಸರಿಕೆಂಡು ಬಂದಿದ್ದರಿಂದ ದಿನಾಂಕ ೧೩-೭-೮೭ರಂದು ತಡೆಯಾಜ್ಞೆ ಮಾಡಿದರು. ತಡೆಯಾಜ್ಞೆ ಮಾಡಿದ ಮೇಲೆ ಮತ್ತೆ ೨೫-೨೬ನೇ ತಾರೀಖು ಗಿಡ ನೆಡುವಂಥ ಪ್ರಯತ್ನ ಮಾಡಿದಾಗ, ಸಮಿತಿಯವರು ಅರಣ್ಯ ಅಧಿಕಾರಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಅರಣ್ಯ ಸಂರಕ್ಷಣೆ ಅಧಿಕಾರಿಗಳನ್ನು ಹಾಗೂ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಗಿಡ ನೆಡುವುದನ್ನು ನಿಲ್ಲಿಸಬೇಕೆಂದು ಹೇಳಿದಮೇಲೆ ತಡೆಯಾಜ್ಞೆ ಕಳುಹಿಸಿಕೊಟ್ಟಿದ್ದಾರೆ. ಸ್ವಾಮಿ, ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಸಾಗರ ಭಾಗದಲ್ಲಿ ಸುಮಾರು ಜನ ಅರಣ್ಯ ರಕ್ಷಣೆಗಾಗಿ ಹೋರಾಟ ಮಾಡುತ್ತಿದ್ದಾರೆ, ತಡೆಯಾಜ್ಞೆ ಕೊಟ್ಟಮೇಲೂ ಎಂ.ಪಿ.ಎಂ. ಅಧಿಕಾರಿಗಳು ಗಿಡ ನಡೆವುದಕ್ಕೆ ಪ್ರಯತ್ನ ಏತಕ್ಕೆ ಮಾಡಿದರು ? ಇದನ್ನು ಪ್ರತಿಭಟನೆ ಮಾಡಿದ ಸಮಿತಿಯವರ ಮೇಲೆ ಹಲ್ಲೆ ಮಾಡಿದ್ದಾರೆ. ನಾಲ್ಕು ಜನ ಆಸ್ಪತ್ರೆಗೆ ಸೇರಿದ್ದಾರೆ. ಸಾಗರದ ಶಾಸಕರಾಂಥ ಮಾನ್ಯ ಧರ್ಮಪ್ಪನವರು ಸ್ಥಳಕ್ಕೆ ಭೇಟಿ ನೀಡಿ ಮೂರು ಜನ ಅಧಿಕಾರಿಗಳು ಏನು ಹಲ್ಲೆ ಮಾಡಿದ್ದಾರೆ: ಅಶ್ವತ್ಥ ನಾರಾಯಣ, ನಾಗರಾಜು, ಇನ್ನೊಬ್ಬ ಅಧಿಕಾರಿ ಇವರುಗಳನ್ನು ಸಸ್ಪೆಂಡ್ ಮಾಡಿ, ವಿಚಾರ ಮಾಡಿ ಎಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ ಮೇಲೆ ಸಮಿತಿಯವರು ಹೋರಾಟ ನಿಲ್ಲಿಸಿದ್ದಾರೆ. ತಮ್ಮ ಬಗ್ಗೆ ನನಗೆ ತುಂಬ ಗೌರವ ಇದೆ. ಆದರೆ, ತಾವು ರಾಜ್ಯದ ಜನತೆಯ ಹಿತವನ್ನು ರಕ್ಷಣೆ ಮಾಡದೆ, ಕೇವಲ ಅಧಿಕಾರಿಗಳು ಕೊಟ್ಟಂತಹ ವರದಿಯನ್ನು ಮಾತ್ರ ಹೇಳಿದ್ದೀರಿ. ಅವರು ಕೊಟ್ಟಂತಹ ಅನ್ಯಾಯದ ವರದಿಯನ್ನು ಓದುವಂತ ಪ್ರಯತ್ನ ಮಾಡಿದ್ದು ಸರಿಯಲ್ಲ. ನನಗೆ ಇದರಲ್ಲಿ ಎರಡು ವಿಷಯಗಳಿಗೆ ಸಂಬಂಧಪಟ್ಟಂತೆ ವಿವರಣೆ ಬೇಕಾಗಿದೆ,

(೧) ಕೆ.ಪಿ.ಸಿ.ಯವರಿಗೆ ನಿರ್ದಿಷ್ಟವಾದ ಉದ್ದೇಶಕ್ಕಾಗಿ ಕೊಟ್ಟಿದ್ದ ಜಮೀನನ್ನು ಎಂ.ಪಿ.ಎಂ. ನವರಿಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ ?

(೨) ೧೩ನೇ ತಾರೀಖು ತಾವು ತಡೆಯಾಜ್ಞೆ ಕೊಡಲಿಲ್ಲವೇ ? ಸರ್ಕಾರ ಕೂಡ ಎಂ.ಪಿ.ಎಂ, ನವರಿಗೆ ಬೇಕಾದಂಥ ನೀಲಗಿರಿ ಮತ್ತಿತರ ಗಿಡಗಳನ್ನು ಬೆಳೆಸುವುದಕ್ಕೆ ಬೆಂಬಲ ಕೊಡುತ್ತೀರಾ ?

ಸ್ವಾಮಿ, ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಸದನದ ಸಮಿತಿ ಮಾಡಿ, ಎಂ.ಪಿ.ಎಂ ಅಧಿಕಾರಿಗಳು ಹಲ್ಲೆ ಮಾಡಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಧರ್ಮಪ್ಪನವರೂ, ಜಿಲ್ಲಾ ಪರಷತ್ತಿನವರೂ ಪತ್ರ ಬರೆದಿದ್ದಾರೆ. ನನ್ನ ಹತ್ತಿರ ಇದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳೂ ಇವೆ. ಅವುಗಳನ್ನು ಕಳುಹಿಸಿಕೊಡುತ್ತೇನೆ,

(ದಾಖಲೆಗಳನ್ನು ಸಂಬಂಧಪಟ್ಟ ಸಚಿವರಿಗೆ ಕಳುಹಿಸಿಕೊಟ್ಟರು)

ಎಂ.ಪಿ.ಎಂ. ನವರಿಗೆ ವರ್ಗ ಮಾಡಿದ್ದು ಯಾವಾಗ ತೀರ್ಮಾನ ತೆಗೆದುಕೊಳ್ಳಬೇಕಾದರೂ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಯಾವಾಗ ತೀರ್ಮಾನ ತೆಗೆದು

ಕೊಂಡಿತು ಎಂಬ ಆಜ್ಞೆಯನ್ನು ಒದಗಿಸಬೇಕು. ಪ್ರತಿಭಟನೆಯಾವ ಮೇಲೂ ಕೂಡ ಅಂದರೆ ೨೭-೭-೮೭ರಲ್ಲಿ ಕೂಡ ಗಿಡ ನೆಟ್ಟಿದ್ದಾರೆ. ೧ನೇ ತಾರೀಖು ಗಲಾಟೆಯಾಗಿದೆ. ಎಂ.ಪಿ.ಎಂ. ಅಧಿಕಾರಿಗಳು ಅಂದು ರಾತ್ರಿ ಸುಳ್ಳು ಸರ್ಟಿಫಿಕೇಟ್ ತಗೆದುಕೊಳ್ಳುವುದಕ್ಕೆ ಬಂದಾಗ ಸಾಗರದ ಜನ ಪ್ರತಿಭಟನೆ ಮಾಡಿದ್ದಾರೆ. ಕೆ.ಪಿ.ಸಿ. ಮ್ಯಾನೇಜಿಂಗ್ ಡೈರೆಕ್ಟರ್‌ರವರು ಆಗಸ್ಟ್ ೫ರಂದು ಎಂ.ಪಿ.ಎಂ. ಮ್ಯಾನೇಜಿಂಗ್ ಡೈರೆಕ್ಟರ್‌ರವರಿಗೆ ಪತ್ರ ಬರೆದಿದ್ದಾರೆ ಕೃತಕವಾದ ಆಜ್ಞೆಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದರ ಎಲ್ಲಾ ವಿವರಗಳನ್ನು ಕೊಡಬೇಕೆಂದು ಹೇಳುತ್ತೇನೆ, ಎ-೧, ಆಗಸ್ಟ್ ೫ ೧೯೮೭ರಂದು ಎಂ. ಡಿ. ಅವರು ಶ್ರೀ ಕೆ. ಪಿ. ಸುರೇಂದ್ರನಾಥ್ ಅವರಿಗೆ ಬರೆದಿರುವ ಕಾಪಿಯನ್ನು ನಾನು ಮಾನ್ಯ ಮಂತ್ರಿಗಳ ಕಡೆ ಕಳುಹಿಸಿಕೊಡುತ್ತೇನೆ.

(ಸಂಬಂಧಪಟ್ಟ ಕಾಪಿಯನ್ನು ಮಾನ್ಯ ಸದಸ್ಯರು ಮಂತ್ರಿಗಳಿಗೆ ಕಳುಹಿಸಿಕೊಟ್ಟರು)

ಅಧ್ಯಕ್ಷರೇ ಇದೆಲ್ಲಾ ಹೊಸದಾಗಿ ಸೃಷ್ಟಿಮಾಡಿವಂಥ ದಾಖಲೆಗಳು. ಇವೊತ್ತು ಮುಗ್ಧ ರೈತರ ಮೇಲೆ ಹಲ್ಲೆಯಾಗಿದೆ. ಆದ್ದರಿಂದ ತಕ್ಷಣ ಇದರ ಬಗ್ಗೆ ನ್ಯಾಯಾಂಗ ತನಿಖೆ ಮಾಡಬೇಕು, ಹಲ್ಲೆ ಮಾಡಿರತಕ್ಕ ಅಧಿಕಾರಿಗಳ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಆ ಜಾಗವನ್ನು ಗೋಮಾಳ ವಾಗಿಯೇ ಉಳಿಸಿಕೊಳ್ಳಬೇಕು. ಇದಕ್ಕೆಲ್ಲಾ ಸರಿಯಾದಂಥ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ಬೇಡುತ್ತೇನೆ. ಹಲ್ಲೆ ನಡೆಯುವುದಕ್ಕೆ ಮುಂಚೆ ೧೫-೨೦ ಜನರು ಬಂದು ತಮ್ಮನ್ನು ಭೇಟಿ ಮಾಡಿದ್ದರೋ ಇಲ್ಲವೋ ಎನ್ನುವುದನ್ನು ತಿಳಿಸಬೇಕು.

ಶ್ರೀ ಬಿ. ಧರ್ಮಪ್ಪ.—ಅಧ್ಯಕ್ಷರೇ, ಈಗಾಗಲೇ ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಪೂರ್ತಿ ಸತ್ಯ ಅಲ್ಲ ಎಂದು ಕೆಲವು ಮಾತುಗಳಲ್ಲಿ ಹೇಳಬೇಕಾಗಿದೆ. ಆದರಲ್ಲಿ ಕೇವಲ ಅಧಿಕಾರಿಗಳು ಗಲಾಟೆಮಾಡಿದ್ದು ಮಾತ್ರ ಇದೆ. ತಾರೀಖು ೧೮-೮-೧೯೮೭ರಂದು ಅವರ ಗಿಡ ನೆಡುವ ಪ್ರಯತ್ನಪಟ್ಟಾಗ ಇವರು ಶಾಂತಿಯುತ ಸತ್ಯಾಗ್ರಹ ಮಾಡಿದ್ದರು. ಅಧಿಕಾರಿಗಳು ಹಲ್ಲೆ ಮಾಡಿದ್ದಾರೆ. ಸತ್ಯಾಗ್ರಹಿಗಳು ಅಲ್ಲಿ ಯಾರೂ ಹಲ್ಲೆ ಮಾಡಿಲ್ಲ. ಈ ಜಮೀನು ಕೆ.ಪಿ.ಸಿ. ಅಥವಾ ಎಂ.ಪಿ.ಎಂ.ಗೆ ಸೇರಿದ್ದರೂ, ಈ ಜಮೀನು ಮುಳುಗಡೆಯಾಗಿಲ್ಲ. ಕೆರೆ ಅಂಗಳ ಆಗುವುದಿಲ್ಲ; ಸಬ್‌ಮರ್ಷನ್ ಟೈಮ್‌ನಲ್ಲಿ ಕೆ.ಪಿ.ಸಿ. ಅಕ್ವೈರ್ ಮಾಡಿದೆ. ಈ ಜಮೀನು ಮೊದಲು ಗೋಮಾಳ ಪ್ರದೇಶವಾಗಿತ್ತು. ಅದು ಮೊದಲು ಜಾನುವಾರುಗಳು ಮೇಯುವಂಥ ಜಾಗ. ಶರಾವತಿ ಕೆ.ಪಿ.ಸಿ. ಲ್ಯಾಂಡ್ ಏನಿದೆ ಅದು ಸಾವಿರಾರು ಎಕರೆ ಬೇರೆ ಭಾಗದಲ್ಲಿ ಇದ್ದರೂ ಅವರು ಆ ಜಾಗಕ್ಕೆ ಹೋಗದೆ ಊರು ಬಡಾವಣೆಗೆ ಅವಕಾಶವಿಲ್ಲದಂತೆ ಜಾನುವಾರುಗಳ ಮೇವಿಗೆ, ಪ್ರತಿಯೊಂದಕ್ಕೂ ಅನುಕೂಲ ವಾಗಿರತಕ್ಕ ಜಾಗದಲ್ಲಿ ಇವರು ಮಾಡಲಿಕ್ಕೆ ಹೊರಟಿದ್ದಾರೆ. ಈ ಪ್ರದೇಶದ ಒಂದು ವಿಶಿಷ್ಟ ಅಂದರೆ ಹಗಲು ಹೊತ್ತಿನಲ್ಲೆಯೇ ಕಾಡುಕೋಣ ಕಾಡುಹಂದಿ ನುಗ್ಗುವಂಥ ಪ್ರದೇಶ. ಇವರು ಗಿಡ ನೆಡುವಂಥ ಜಾಗ ಜಮೀನಿನ ಪಕ್ಕ, ಗದ್ದೆಗಳ ಪಕ್ಕ, ಊರುಗಳ ಪಕ್ಕ ಆಗಿರುವುದರಿಂದ ಅಲ್ಲಿ ಕಾಡು ಹೆಚ್ಚು ಬೆಳೆಯಿತು ಅಂದರೆ ಅವರು ಅಲ್ಲಿರತಕ್ಕ ಜಮೀನುಗಳನ್ನು ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಆ ಜಾಗದಲ್ಲಿ ಗಿಡ ನೆಡುವುದರ ಬದಲು ಊರಿಗೆ ದೂರವಾದ ಸ್ಥಳದಲ್ಲಿ ಗಿಡ ಗಳನ್ನು ನೆಡಿ ಎಂದು ಸತ್ಯಾಗ್ರಹ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅಧಿಕಾರಿಗಳು ಹಲ್ಲೆ ಮಾಡಿ ದ್ದಾರೆಯೇ ಹೊರತು, ಊರಿನವರು ಯಾರು ಹಲ್ಲೆ ಮಾಡಿಲ್ಲ. ನಮ್ಮ ಮಲೆನಾಡಿನಲ್ಲಿ ಇದು ದೊಡ್ಡ ಸಮಸ್ಯೆಯಾಗಿದೆ. ಅಲ್ಲಿ ಕಾಡು ಇದೆ, ಹೋದವರ್ಷ ಎಂ.ಪಿ.ಎಂ. ಅವರು ಕೆ.ಪಿ.ಸಿ. ಅವರು ಕಳೆದ ಆಕ್ಟೋಬರ್‌ನಿಂದ ಬುಲ್ಡೋಜರ್‌ನಿಂದ ಗಿಡ ಮರ ತೆಗೆಸಿದರು. ತಾವು ಇಷ್ಟು ಹೇಳಿ ಮುಗಿಸಿದರೆ ಆಗುವುದಿಲ್ಲ ಅದು ಸೆನೆಸಿಟೀವ್ ಏರಿಯಾ ಆಗಿದೆ, ಹೊತ್ತೆ ಏನಾದರೂ ಅವರಿಗೆ ಗಿಡಗಳನ್ನು ನೆಡಲಿಕ್ಕೆ ಅವಕಾಶ ಕೊಟ್ಟರೆ, ದೊಡ್ಡ ಗಲಾಟೆ ಆಗುವ ಸಂಭವ ಇದೆ. ಆ ಭಾಗದಲ್ಲಿ ಗಿಡ ನೆಡಲಿಕ್ಕೆ ಬಿಡದಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ, ಅಲ್ಲಿರತಕ್ಕ ಸ್ಥಳೀಯ ಜನರನ್ನು ಕೇಳಿದರೆ ಬೇರೆ ಬೇರೆ ಕಡೆ ಜಾಗ ಇರುವುದನ್ನು ಅವರೇ ಹೇಳುತ್ತಾರೆ. ಸಾವಿರಾರು ಗಿಡಗಳನ್ನು ನೆಡುವಂಥ ಜಾಗ ಇದೆ, ಒಟಿ ನಲ್ಲಿ ಊರು ಪಕ್ಕದಲ್ಲಿ ಗಿಡಗಳನ್ನು ನೆಡದೆ ಬೇರೆ ಬೇರೆ ಕಡೆಗಳಲ್ಲಿ ಗಿಡಗಳನ್ನು ನೆಡುವಂಥ ವ್ಯವಸ್ಥೆ ಮಾಡಬೇಕು. ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದಿಷ್ಟೆ. ಅಧಿಕಾರಿಗಳೇ ಅವರ ಮೇಲೆ ಹಲ್ಲೆಯನ್ನು ನಡೆಸಿದ್ದಾರೆ. ಅವರನ್ನು ಸಸ್ಪೆಂಡ್ ಮಾಡಿ ಅವರಮೇಲೆ ಕ್ರಮ ತೆಗೆದುಕೊಳ್ಳಬೇಕು.

ಇನ್ನು ಗಿಡ ನೆಡುವ ವಿಚಾರ. ಮಲೆನಾಡು ಭಾಗದಲ್ಲಿ ಎಲ್ಲೆಲ್ಲಿ ಗಿಡಗಳನ್ನು ನೆಡಬೇಕೆಂದಿದ್ದಾರೆ ಅಲ್ಲಿ ಜನರ ಅಭಿಪ್ರಾಯಗಳನ್ನು ತಿಳಿದು ನೆಡಬೇಕು. ಮಲೆನಾಡಿನಲ್ಲಿ ಬಹಳ ದಟ್ಟವಾದ ಕಾಡಿದೆ. ಅದು ಕಾಡು ಇಲ್ಲದ ಜಾಗವೇನೂ ಅಲ್ಲ. ಅಥವಾ ಅದು ಬಯಲು ಪ್ರದೇಶವೇನೂ ಅಲ್ಲ. ಅಲ್ಲಿ

ಹಗಲು ಹೊತ್ತಿನಲ್ಲೇ ಕಾಡು ಹಂದಿ, ಕಾಡುಕೋಣಗಳು ಗದ್ದೆಗಳಿಗೆ ನುಗ್ಗಿ ಫಸಲನ್ನು ಹಾಳು ಮಾಡುತ್ತಿವೆ. ಗದ್ದೆ ಹೊಲಗಳಲ್ಲಿ ಫಸಲುಗಳು ಉಳಿಯುವುದೇ ಕಷ್ಟ. ಅಂಥಾದ್ದರಲ್ಲಿ ರೈತರ ಜಮೀನಿನ ಬದುಗಳ ಹತ್ತಿರ ಗಿಡಗಳನ್ನು ನೆಟ್ಟರೆ ಜನರಿಗೆ ಬಹಳ ಕಷ್ಟವಾಗುತ್ತದೆ. ಕೆ.ಪಿ.ಸಿ.ನವರು ಇಲ್ಲಿಗೆ ವರ್ಗಾವಣೆ ಮಾಡಿದ್ದಾರೆಂದು ಹೇಳುವುದಾದರೆ ನಾಳೆ ದೊಡ್ಡ ಗಲಾಟೆಯಾಗುತ್ತದೆ.....

ಅಧ್ಯಕ್ಷರು.—ಮಂತ್ರಿಗಳು ಏನು ಮಾಡಬೇಕೆಂಬುದನ್ನು ಹೇಳಿ.

ಶ್ರೀ ಬಿ. ಧರ್ಮಪ್ಪ.—ಅಧಿಕಾರಿಗಳಮೇಲೆ ಕ್ರಮ ತೆಗೆದುಕೊಂಡು ಯಾವ ಜಾಗದಲ್ಲಿ ಈಗ ಗಿಡಗಳನ್ನು ನೆಡಬೇಕೆಂದು ಮಾಡುತ್ತಿದ್ದೀರಿ ಅದನ್ನು ಕೈಬಿಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದರ ಪ್ರಕಾರ ಮೇಲ್ಕಟ್ಟದ ಅಧಿಕಾರಿಯೊಬ್ಬರನ್ನು ಅಲ್ಲಿಗೆ ಕಳುಹಿಸಿ ಅಲ್ಲಿ ವಾಸ ಮಾಡತಕ್ಕ ಜನರಿಗೆ ತೊಂದರೆ ಇದೆಯೇ, ಇಲ್ಲವೇ ಎಂಬುದನ್ನು ತಿಳಿದುಕೊಂಡು ಆ ಜನರಿಗೆ ತೊಂದರೆ ಯೇನಾದರೂ ಆಗುವುದಾದರೆ ಆ ಸ್ಥಳದಿಂದ ಬೇರೆಕಡೆ ಕಳುಹಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದ ಜೆ.ಹೆಚ್.ಪಟೇಲ್ ರವರು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ನನ್ನ ಪ್ರಶ್ನೆ ಅದಲ್ಲ.....

ಅಧ್ಯಕ್ಷರು.—ನಿನ್ನೆ ನೀವು ಅರ್ಧ ತಾಸು ಭಾಷಣ ಮಾಡಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಭಾಷಣ ಮಾಡಲಿಲ್ಲ. ಆ ಭಾಗದ ಜನರ ಸಮಸ್ಯೆ ಏನು ಎಂಬುದರ ಕಡೆಗೆ ತಮ್ಮ ಗಮನ ಸೆಳೆಯುತ್ತಿದ್ದೇನೆ.....

ಅಧ್ಯಕ್ಷರು.—ವಿವರಣೆ ಕೇಳಿ ಎಂದರೆ ನೀವು ಭಾಷಣವನ್ನೇ ಮಾಡಿದಿರಿ. ನಾನು ನಿಮಗೆ ಅವಕಾಶವನ್ನು ಕೊಟ್ಟಿಲ್ಲ. ದಯವಿಟ್ಟು ಕೂಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನಗೆ ಮಾನ್ಯ ರೆವಿನ್ಯೂ ಮಂತ್ರಿಗಳಿಂದ ಉತ್ತರ ಬಂದಿಲ್ಲ. ನಾನು ಒಂದೇ ಒಂದು ಪ್ರಶ್ನೆಯನ್ನು ತಮ್ಮ ಮೂಲಕ ಕೇಳಬಯಸುತ್ತಿದ್ದೇನೆ.....

ಅಧ್ಯಕ್ಷರು.—ತಮಗೆ ಎಷ್ಟು ಉತ್ತರ ಹೇಳಿದರೂ ಅದು ಸಮಾಧಾನವಾಗುವುದಿಲ್ಲ.

ಶ್ರೀ ಬಿ. ಎಸ್ ಯಡಿಯೂರಪ್ಪ.—ತಾವು ನನ್ನ ಬಗ್ಗೆ ಏತಕ್ಕೆ ಹೀಗೆ ಮಾಡುತ್ತೀರಿ? ರೆವಿನ್ಯೂ ಮಂತ್ರಿಗಳು ನನಗೆ ಉತ್ತರ ಕೊಟ್ಟರೇ? ಈ ಘಟನೆ ಏತಕ್ಕೋಸ್ಕರ ನಡೆಯಿತು? ಮಾನ್ಯ ಅಧ್ಯಕ್ಷರೆ, ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ನನ್ನ ಪ್ರಶ್ನೆ ಏನೆಂದರೆ.....

ಅಧ್ಯಕ್ಷರು.—ತಾವು ದಯವಿಟ್ಟು ಕೂಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಗಳಿಂದ ನನಗೆ ನೇರವಾದ ಉತ್ತರಬೇಕು. ರೆವಿನ್ಯೂ ಮಂತ್ರಿಗಳಿಂದ ನನಗೆ ಉತ್ತರ ಬಂದಿಲ್ಲ. ನನ್ನ ಬಗ್ಗೆ ತಾವು ಏತಕ್ಕೆ ಈ ರೀತಿ ಯೋಚನೆ ಮಾಡುತ್ತೀರಿ?

ಅಧ್ಯಕ್ಷರು.—ಮಾನ್ಯ ಜೆ. ಹೆಚ್. ಪಟೇಲರು ಏನು ಉತ್ತರ ಹೇಳಿದರು.....

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಘಟನೆ ಏತಕ್ಕೆ ನಡೆಯಿತು.....

ಅಧ್ಯಕ್ಷರು.—ಅವರು ಮೊದಲು ಉತ್ತರ ಕೊಡಲಿ, ಆನಂತರ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟಿ.—ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಮಾಡುತ್ತಿರುವವರು ಎಂ. ಪಿ. ಎಂ. ನವರು. ಎಂ.ಪಿ.ಎಂ. ನವರ ಮೇಲೆ ಅಧಿಕಾರ ಇರತಕ್ಕದ್ದು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಲ್ಲಿ. ಆದ್ದರಿಂದ ಮಾನ್ಯ ಜೆ. ಹೆಚ್. ಪಟೇಲ್‌ರವರು ಏನು ಉತ್ತರ ಹೇಳಿದ್ದಾರೆ ಅದೇ ನನ್ನ ಉತ್ತರವೂ ಕೂಡ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ನಾನು ಏನು ಕೇಳಿದೆ ಎಂದರೆ, ಮಾನ್ಯ ಸಚಿವರಲ್ಲಿ ನಾನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಅಲ್ಲಿರತಕ್ಕ ಸತ್ಯಾಗ್ರಹಿಗಳು ತಮ್ಮನ್ನು ದಿನಾಂಕ ೧೩ನೇ ಜುಲೈ ೧೯೮೭ ರಂದು ಬಂದು ಭೇಟಿ ಮಾಡಿ, ಅಲ್ಲಿ ನೆಡುತೋಪನ್ನು ನೆಡಬಾರದು, ಗಲಾಟೆ

ಆಗುತ್ತದೆಂದು ನಿಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಂಡರೋ, ಇಲ್ಲವೋ? ನಿಮಗೂ ಇದಕ್ಕೂ ಸಂಬಂಧ ಇಲ್ಲದಿದ್ದರೆ, ನೀವು ಏತಕ್ಕೆ ಅದಕ್ಕೆ ತಡೆಯಾಜ್ಞೆಯನ್ನು ಕೊಟ್ಟಿರಿ? ನೀವು ೧೩ನೇ ಜುಲೈ ೧೯೮೭ ರಂದು ಕೊಟ್ಟಂಥ ತಡೆಯಾಜ್ಞೆಯನ್ನು ನಿಮ್ಮ ಅಧಿಕಾರಿಗಳು ಮುಚ್ಚಿಟ್ಟು ಮತ್ತೊಂದು ಸಾರಿ.....

ಅಧ್ಯಕ್ಷರು.—ಈ ರೀತಿ ನೀವು ಭಾಷಣ ಮಾಡಿದರೆ ಆಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಏನು ಕೇಳಿದ್ದೇನೆ, ಅದಕ್ಕೆ ಅವರಿಂದ ಉತ್ತರ ಬೇಕು. ನನಗೆ ಏತಕ್ಕೆ ಉತ್ತರ ಕೊಡುವುದಿಲ್ಲ? ನಾನು ಏನು ತಪ್ಪು ಮಾಡಿದ್ದೇನೆ?

ಅಧ್ಯಕ್ಷರು.—ಈ ತರಹ ನೀವು ಸಿಟ್ಟಿನಲ್ಲಿ ಮಾತನಾಡುವುದಾದರೆ ಐ ಹ್ಯಾವ್ ಟು ಟೇಕ್ ಆ್ಯಕ್ಷನ್ ಎಗೈನ್ಸ್ಟ್ ಯು.

ಶ್ರೀ ಬಿ. ಎಸ್. ಯಡಿಯೂರಪ್ಪ.—ತೆಗೆದುಕೊಳ್ಳಿ ಸ್ವಾಮಿ, ಏನು ಕ್ರಮ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ನಾನು ಏನು ತಪ್ಪು ಮಾಡಿದ್ದೇನೆ ಎಂಬುದನ್ನು ಹೇಳಿ. ನನಗೆ ನೀವು ಉತ್ತರ ಕೊಡುವುದಿಲ್ಲವೇ? ನಾನು ಏನು ತಪ್ಪು ಮಾಡಿದ್ದೇನೆ ಹೇಳಿ. ಏನ್ರೀ, ನೀವು ನನಗೆ ಉತ್ತರ ಕೊಡುವುದಿಲ್ಲವೇ? ನನ್ನನ್ನು ನೀವು ಏತಕ್ಕೆ ಈ ರೀತಿ ನೋಡುತ್ತಿದ್ದೀರಿ. ನಾನು ಆ ಜನರಿಂದ ಓಟು ತೆಗೆದುಕೊಂಡು ಬಂದಿಲ್ಲವೆ?.....

(ಮಾನ್ಯ ಯಡಿಯೂರಪ್ಪನವರು ಕಾಗದ ಪತ್ರಗಳನ್ನು ಚೂರು ಚೂರು ಮಾಡಿ ಬೆಲ್ ನೊಳಗೆ ಬಿಸಾಡಿದರು.)

ಅಧ್ಯಕ್ಷರು.—ನೀವು ಸಿಟ್ಟಾಗಬೇಡಿ. ನೀವು ಎರಡನೇ ಸಾರಿ ಆರಿಸಿ ಬಂದಿದ್ದೀರಿ. ಸಿಟ್ಟನ್ನು ಕಡಿಮೆ ಮಾಡಿ. ಅಷ್ಟೊಂದು ಸಿಟ್ಟು ಬೇಡ ತಾಳ್ಮೆ ಇರಲಿ.....

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಏನು ತಪ್ಪು ಮಾಡಿದ್ದೇನೆ ಹೇಳಿ. ನನ್ನ ಪ್ರಶ್ನೆಗೆ ಉತ್ತರ ಕೊಡುವುದಕ್ಕಾಗುವುದಿಲ್ಲವೇ?

ಅಧ್ಯಕ್ಷರು.—ಇದು ಪದ್ಧತಿಯಲ್ಲ. ನೀವು ಸಿಟ್ಟಿಗೆ ಏಳಬಾರದು. ಶಾಂತಿಯಿಂದ ಇರಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಏತಕ್ಕೆ ಸಿಟ್ಟುಮಾಡಿಕೊಳ್ಳುತ್ತಿದ್ದೇನೆಂದರೆ, ನಾನು ಇದರ ಬಗ್ಗೆ ಕಾಲಿಂಗ್ ಅಟೆನ್ಷನ್ ಕಳುಹಿಸಿ, ಸ್ಥಳಕ್ಕೆ ಹೋಗಿ ನೋಡಿಕೊಂಡುಬಂದು, ಈಗ ಅರಣ್ಯ ಸಚಿವರನ್ನು ಒಂದು ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ಉತ್ತರ ಸಿಕ್ಕುವುದಿಲ್ಲ ಎಂದರೆ.....

ಅಧ್ಯಕ್ಷರು.—ನಿಮಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಸಚಿವರೂ ಸಾಕಷ್ಟೇ ಉತ್ತರ ಹೇಳಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗ ಅರಣ್ಯ ಸಚಿವರು ನನಗೆ ಉತ್ತರ ಕೊಟ್ಟರೇ? ದಯವಿಟ್ಟು ನನ್ನನ್ನು ಈ ರೀತಿ ಕಾಣಬೇಡಿ. ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ.....

ನಮ್ಮ ಗ್ರಾಮದಲ್ಲಿ ಈ ರೀತಿಯಾದ ಘಟನೆ ನಡೆದಿದೆ. ಆ ಅಧಿಕಾರಿಯ ಮೇಲೆ ಯಾವ ರೀತಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಇದು ಸತ್ಯಕ್ಕೆ ದೂರವಾದ ಘಟನೆ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ೧೩ನೇ ಜುಲೈ ೧೯೮೭ರಲ್ಲಿ ನಾವು ಪ್ರಾರ್ಥನೆ ಮಾಡಿಕೊಂಡ ಮೇಲೆ ಆಜ್ಞೆಯನ್ನು ಮಾಡಿರುತ್ತಾರೆ. ಆ ಆಜ್ಞೆಯನ್ನು ಮುಚ್ಚಿಟ್ಟಿದ್ದಾರೆ. ಮುಖ್ಯ ಮಂತ್ರಿಗಳನ್ನು ಮತ್ತು ಅರಣ್ಯ ಅಧಿಕಾರಿಗಳನ್ನು ಭೇಟಿ ಮಾಡಿದ್ದಾರೆ .....

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ತಮಗೆ ಮಾತನಾಡಲು ಮತ್ತೊಮ್ಮೆ ಅವಕಾಶವನ್ನು ಕೊಟ್ಟರೆ ತಾವು ಭಾಷಣ ಮಾಡುತ್ತೀರಲ್ಲ.

(ಗೊಂದಲ)

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ವಿನಾಕಾರಣ ಆವೇಶ ಪಡಬೇಡಿ. ನಮ್ಮ ಆಜ್ಞೆಯನ್ನು ಉಲ್ಲಂಘನೆ ಮಾಡಿದ್ದರೆ, ಆ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಸಮಸ್ಯೆ ಏನು ಎಂದರೆ ಮರ ನೆಡತಕ್ಕಂಥ ಕಾರ್ಯಕ್ರಮ ಏನು ಇದೆ, ಇದರಿಂದ ಅಲ್ಲಿ ವಾಸ ಮಾಡತಕ್ಕಂಥ ಜನರಿಗೆ ದಿನನಿತ್ಯ ಜೀವನ ಮಾಡತಕ್ಕಂಥ ಜನರಿಗೆ ತೊಂದರೆಯಾಗುತ್ತಿದೆ ಎಂದು ಮಾನ್ಯ ಧರ್ಮಪ್ಪ ನವರು ಹೇಳಿದರು. ಅದಕ್ಕೆ ಮಾನ್ಯ ಸಚಿವರು ಆ ಜನರಿಗೆ ತೊಂದರೆ ಆದರೆ ಮೇಲಾಧಿಕಾರಿಗಳನ್ನು ಕಳುಹಿಸಿ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದರು.

ಶ್ರೀ ಬಿ. ಎಸ್. ಯಡಿಯೂರಪ್ಪ.—೧೩ನೇ ಜುಲೈ ೧೯೮೭ರಂದು ಊರ ಪ್ರಮುಖರು ಭೇಟಿ ಮಾಡಿದ್ದಾರೆ.

ಶ್ರೀ ಜಿ. ಎಸ್. ಬಾಗಲಕೋಟಿ.—ಮಾನ್ಯ ಅಧ್ಯಕ್ಷರೇ, ಗ್ರಾಮಸ್ಥರು ಬಂದಿದ್ದುದು ನಿಜ. ೧೨ನೇ ಆಗಸ್ಟ್ ೧೯೮೭ರಲ್ಲಿ ಮತ್ತು ೧೩ನೇ ಜುಲೈ ೧೯೮೭ರಲ್ಲಿ ಬಂದಾಗ ಅವರು ಕೊಟ್ಟಂಥ ಸೂಚನೆಯನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುವುದಾಗಿ ಹೇಳಿದ್ದೇನೆ. ಈವತ್ತು ಮಾನ್ಯ ಹಿರಿಯ ಮಂತ್ರಿಗಳವರು ಕೂಡ ಹೇಳಿದ್ದಾರೆ. ಯಾರು ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ಅವರು ಎಷ್ಟೇ ಪ್ರಬಲರಿರಲಿ, ವಿಚಾರಣೆ ಮಾಡಿ ಅವಶ್ಯಕ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು.—ಮಾನ್ಯ ಭೂಪತಿಯವರೇ ತಮ್ಮ ಪ್ರಶ್ನೆಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಯು. ಭೂಪತಿ.—ಲೇಬರ್ ಮಿನಿಸ್ಟರ್‌ರವರಿಗೆ ಪ್ರಶ್ನೆಯನ್ನು ಕಳುಹಿಸಿ ತಪ್ಪು ಮಾಡಿದ್ದಾರೆ. ಅದನ್ನು ಲೊಕೋಪಯೋಗಿ ಸಚಿವರಿಗೆ ಕಳುಹಿಸಬೇಕಾಗಿತ್ತು.

ಅಧ್ಯಕ್ಷರು.—ಲೇಬರ್‌ನಿಂದ ಪಿ.ಡಬ್ಲ್ಯು.ಡಿ. ಮಿನಿಸ್ಟರ್‌ರವರಿಗೆ ಕಳುಹಿಸಿ ಉತ್ತರ ತರಿಸಿ ಕೊಡುತ್ತೇನೆ. ಸ್ವಲ್ಪ ಸಮಾಧಾನವಾಗಿರಿ.

ಶ್ರೀ ಯು. ಭೂಪತಿ.—ನಾನು ನೀರಾವರಿ ಮಂತ್ರಿಗಳಿಗೆ ಪ್ರಶ್ನೆಯನ್ನು ಕೇಳಿದ್ದೇನೆ. ಅದನ್ನು ಕಾರ್ಮಿಕ ಮಂತ್ರಿಗಳಿಗೆ ವರ್ಗಾವಣೆ ಮಾಡಿದ್ದಾರೆ.

ಅಧ್ಯಕ್ಷರು.—ನಿಮ್ಮ ಪ್ರಶ್ನೆಯನ್ನು ನೀರಾವರಿ ಮಂತ್ರಿಗಳಿಗೆ ವರ್ಗಾವಣೆ ಮಾಡಿ ಉತ್ತರ ಕೊಡಿಸುತ್ತೇನೆ.

(೩) ಉಡುಪಿ ತಾಲ್ಲೂಕಿನಲ್ಲಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಯಿಂದ ಪರಿಸರ ಮಾಲಿನ್ಯವಾಗಿರುವುದರ ಬಗ್ಗೆ

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನಲ್ಲಿನ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಯಿಂದಾಗಿ ಪರಿಸರ ಮಾಲಿನ್ಯ ಉಂಟಾಗಿದ್ದು, ಇದರಿಂದ ಅಲ್ಲಿನ ಗ್ರಾಮಗಳ ಜನಗಳು ತೊಂದರೆಗೀಡಾಗಿರುವ ಬಗ್ಗೆ ವಿದ್ಯುತ್ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ಜಲವಿದ್ಯುತ್ ಯೋಜನೆಗಳ ರಾಜ್ಯ ಸಚಿವರು).—

1. Karnataka Power Corporation Ltd., has proposed to establish a Multifuel Thermal Power Plant at Nandikur Village, which is about 35 Kms from Mangalore, The site selection has been based on a study conducted by Consultants appointed for this purpose. This project is proposed to be developed in two stages.